**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No.255/2020**

**PW-6 CW-1**

| | | |
|---|---|---|
| ಸಾಕ್ಷಿದಾರನ ಹೆಸರು | : | ಬಸಲಿಂಗಮ್ಮ ಗಂಡ ರಮೇಶ ತಂದೆ ಫಕೀರಪ್ಪ |
| ವಯಸ್ಸು | : | 25 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಹುಸೇನಪುರ |
| ಪ್ರಮಾಣಿಕರಿಸಿದ ದಿನಾಂಕ | : | 25-01-2025 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ಚಾಸಾ-4 ನನಗೆ ಅಕ್ಕಳಾಗಬೇಕು. ಚಾಸಾ-5 ನನ್ನ ಅಕ್ಕಳ ಗಂಡ. ಚಾಸಾ-2 ಮತ್ತು 3 ರವರ ಪರಿಚಯ ಇರುವುದಿಲ್ಲ. ಆರೋಪಿತರ ಪರಿಚಯ ಇರುತ್ತದೆ. ನ್ಯಾಯಾಲಯದ ಮುಂದಿರುವ 1 ಮತ್ತು 6 ನೇ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈಗ ಕಳೆದ 06 ವರ್ಷಗಳ ಹಿಂದೆ ವಂದಲಿ ಗ್ರಾಮದ ಹನುಮಪ್ಪನ ಜಾತ್ರೆಗೆ ಮಧ್ಯಾಹ್ನ 12-00 ಗಂಟೆ ಸುಮಾರಿಗೆ ನಾನು, ನನ್ನ ಅಕ್ಕ ಹಾಗೂ ಅಕ್ಕಳ ಗಂಡ ಹೋಗಿದ್ದೆವು. 1 ನೇ ಆರೋಪಿ ಅಮರೇಶ ನನ್ನ ಕೂದಲು ಹಿಡಿದು ಎಳೆದಾಡಿ ನನ್ನ ಸೆರಗನ್ನು ಹಿಡಿದು ಎಳೆದು ಅತ್ಯಚಾರ ಮಾಡಲು ಬಂದಿದ್ದನು. ನಂತರ ನನ್ನ ಅಕ್ಕಳ ಮನೆಯಲ್ಲಿದ್ದಾಗ ಎಲ್ಲಾ ಆರೋಪಿತರು ಕೂಡಿಕೊಂಡು ಬಂದು ನನಗೆ, ನನ್ನ ಅಕ್ಕಳಿಗೆ ಹಾಗೂ ನನ್ನ ಅಕ್ಕಳ ಗಂಡನಿಗೆ ತಾವು ತಂದಿದ್ದ ಬಡಿಗೆಯಿಂದ ಹೊಡೆದಿರುತ್ತಾರೆ. ನನ್ನ ತಲೆಗೆ ಮತ್ತು ಕಾಲಿಗೆ ಹೊಡೆದು ಗಾಯಪಡಿಸಿರುತ್ತಾರೆ. ನಂತರ ನಾನು ಜಾಲಹಳ್ಳಿ ಪೊಲೀಸ ಠಾಣೆಗೆ ಹೋಗಿ ದೂರನ್ನು ನಿಡಿರುತ್ತೇನೆ. ನಾನು ಹೆಬ್ಬೆರಳಿನ ಗುರುತನ್ನು ಹಾಕುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಜಿ ವಕೀಲರು ಪಾಟೀ ಸವಾಲೀಗಾಗಿ ಕಾಲಾವಾಕಾಶ ಕೋರಿರುತ್ತಾರೆ, ಯಾವುದೇ ಸಕಾರಣಗಳು ಇಲ್ಲದ ಕಾರಣ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.